# ಸಹ್ಯಾದ್ರಿ: ಏರೋಫೀಲಿಯಾ ಸಮಾರೋಪ

KP




ಏರೋಫೀಲಿಯಾ ಸ್ಪರ್ಧೆಗಳಲ್ಲಿ ವಿಜೇತರಾದವರು.

**ಮಂಗಳೂರು:** ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ನಡೆದ 2 ದಿನಗಳ ರಾಷ್ಟ್ರೀಯ ಮಟ್ಟದ ಏರೋಮೋಡೆಲಿಂಗ್ ಸ್ಪರ್ಧೆ 'ಏರೋಫಿಲಿಯಾ' ಸಮಾರೋಪಗೊಂಡಿದೆ.

ಎರಡು ದಿನ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ವಿಮಾನ ಮಾದರಿಗಳು ಆಕಾಶದಲ್ಲಿ ಹಾರಾಟ ನಡೆಸಿದವು. ಡ್ರೋಣ್‌ಗಳು ಪರಸ್ಪರ ವಿರುದ್ಧವಾಗಿ ಓಡುವುದು, ವಾಟರ್ ರಾಕೆಟ್‌ಗಳ ಉಡಾವಣೆ ಆಕರ್ಷಣೆಯ ಕೇಂದ್ರವಾಗಿದ್ದವು. ಪೇಪರ್ ಪ್ರೆಸೆಂಟೇಶನ್, ಪೇಪರ್ ಪ್ಲೇನ್, ಡ್ರೋಣ್ ರೇಸ್, ಡೆತ್ ರೇಸ್, ರೋಬೋ ಸುಮೋ ಮತ್ತು ನಿಧಿ ಹುಡುಕಾಟ ಸ್ಪರ್ಧೆಗಳು ನಡೆದವು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿ ನಿವೃತ್ತ ಕಮಾಂಡರ್ ನಾರಾಯಣನ್ ಮಾತನಾಡಿ, ಭಾರತದಲ್ಲಿ ಈ ರೀತಿಯ ಏರೋಮೋಡೆಲಿಂಗ್ ಕಾರ್ಯಕ್ರಮಗಳನ್ನು ನಡೆಸುವ ತಾಂತ್ರಿಕ ಕಾಲೇಜುಗಳು ಬಹಳ ಕಡಿಮೆ. ಏರೋಫಿಲಿಯಾ ಕಳೆದ 2 ವರ್ಷಗಳಿಂದ ಅತ್ಯುತ್ತಮವಾಗಿ ಬೆಳೆಯುತ್ತಿದೆ ಮತ್ತು ಭಾಗವಹಿಸುವವರ ನಡುವಿನ ಸ್ಪರ್ಧೆಯ ಗುಣಮಟ್ಟವೂ ಹೆಚ್ಚಾಗಿದೆ ಎಂದರು.

ಭಂಡಾರಿ ಫೌಂಡೇಶನ್‌ನ ಟ್ರಸ್ಟಿ ದೇವದಾಸ್ ಹೆಗ್ಡೆ, ಪ್ರಾಂಶುಪಾಲ ಡಾ.ಆರ್. ಶ್ರೀನಿವಾಸ ರಾವ್ ಕುಂಟೆ, ಉಪ ಪ್ರಾಂಶುಪಾಲ ಪ್ರೊ. ಎಸ್.ಎಸ್. ಬಾಲಕೃಷ್ಣ ಇದ್ದರು. ಏರೋಫಿಲಿಯಾ ಸ್ಪರ್ಧೆಗಳ ವಿಜೇತರನ್ನು ಸನ್ಮಾನಿಸಲಾಯಿತು.